ಅಸಲು ದಾವಾ ನಂ. 253/2022
ಪಿ ಡಬ್ಲ್ಯು -1

ದಿನಾಂಕಃ 11-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ- ವಾದಿ ಪರ ಶ್ರೀ . ಜಿ ಕೆ ಜಿ ವಕೀಲರಿಂದ .

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಸರ್ವೇ ನಂ.17/1, 17/2, 17/3, 17/4, 17/5, 17/6, 17/7 ಇವುಗಳ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-7 ಎಂದು, ಆಸ್ತಿ ನಂ.103 ರ ಕರಾಕರಣೆಯ ಯಾದಿ ಮತ್ತು ಇ-ಸ್ವತ್ತು ಉತಾರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-8 ರಿಂದ ನಿಪಿ-10 ಎಂದು, ಗ್ರಾಮ ನಮೂನೆ ನಂ. 3 ರ ಮೂಲ ಪ್ರತಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-11 ಎಂದು, ಸರ್ವೇ ನಂ. 17 ರ ಸನ್ 1950 ರಿಂದ 1966 ರವರೆಗಿನ ಕೈ ಬರಹ ಪಹಣಿಯನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-12 ಮತ್ತು ನಿಪಿ-13 ಎಂದು, ಸರ್ವೇ ನಂ.17/1+2A+2B/2A+2B ಇದರ ಸನ್ 2001-2002, 2005-2006, 2010-2011, 2015-2016 ಇವುಗಳ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-14 ರಿಂದ ನಿಪಿ-17 ಎಂದು, ಎಮ್ ಆರ್ ಹೆಚ್-12 ಇದರ ಮೂಲ ಪ್ರತಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-18 ಎಂದು, ತಹಶೀಲ್ದಾರ, ಸವಣೂರು ಇವರು ನೀಡಿದ ಹಿಂಬರಹ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-19 ಎಂದು, ದಿನಾಂಕ 03-04-1967, 19-12-1970 ಹಾಗೂ 01-07-1971 ರ ಖರೀದಿ ಪತ್ರಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-20 ರಿಂದ

ನಿಪಿ-22 ಎಂದು, ದಿನಾಂಕ 14-12-1972 ರ ಖರೀದಿ ಪತ್ರದ ದೃಢೀಕೃತ ನಕಲು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-23 ಎಂದು, ದಿನಾಂಕ 24-12-2020 ರ ಪಾಲು ವಿಭಾಗ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-24 ಎಂದು, ತಹಶೀಲ್ದಾರ ಇವರು ನೀಡಿದ ಜಾತಿ ಮತ್ತು ಆದಾಯ ಪತ್ರ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-25 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲು ಪ್ರಾರ್ಥಿಸುತ್ತೇನೆ.

**ಪಾಟಿ ಸವಾಲುಃ-** ಪ್ರತಿವಾದಿ ಪರ ಶ್ರೀ.ವಿ ಬಿ ಟಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).